ವಿಜ್ಞಾನ ಮತ್ತು ಸಾಹಿತ್ಯ



# ಕಾವ್ಯ ಸತ್ಯ ಮತ್ತು ವೈಜ್ಞಾನಿಕ ಸತ್ಯ ಬೇರೆ ಬೇರೆ

**ವಿಜ್ಞಾನದ ಅಧ್ಯಯನ ತಾನೇತಾನಾಗಿ ವೈಜ್ಞಾನಿಕ ದೃಷ್ಟಿಕೋನವನ್ನು ಸೃಷ್ಟಿಸುವುದಿಲ್ಲ. ಮೂಢ ನಂಬಿಕೆಗಳ ವಿಜ್ಞಾನಿಗಳಿದ್ದಾರೆ, ವೈಜ್ಞಾನಿಕ ದೃಷ್ಟಿಕೋನದ ಸಾಹಿತಿ, ತತ್ವಶಾಸ್ತ್ರಜ್ಞರಿದ್ದಾರೆ.**

■ ಸಿ. ಎನ್. ರಾಮಚಂದ್ರನ್

'ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ'
—ನೇಮಿರಾಜ

ಸಾಹಿತ್ಯ ಮತ್ತು ಇತರ ಜ್ಞಾನಶಾಖೆಗಳ ನಡುವಿನ ಸಂಬಂಧವನ್ನು ಕುರಿತ ಚರ್ಚೆ ಬಹು ಹಳೆಯದು ಹಾಗೂ ಎಲ್ಲಾ ದೇಶಗಳಲ್ಲಿಯೂ ಮತ್ತೆ ಮತ್ತೆ ಮುನ್ನೆಲೆಗೆ ಬರುವ ವಿಷಯ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಈ ಚರ್ಚೆ ಅಥವಾ ವಾದವಿವಾದ ಪ್ಲೇಟೊ–ಅರಿಸ್ಟಾಟಲ್ (ಸಾಹಿತ್ಯ ಮತ್ತು ತತ್ವಶಾಸ್ತ್ರ) ಅವರಿಂದ ಪ್ರಾರಂಭವಾಗಿ ಅನೇಕ ಕಾಲಘಟ್ಟಗಳಲ್ಲಿ ಮತ್ತೆ ಮತ್ತೆ ನಡೆದಿದೆ. ಸಾಹಿತ್ಯ ಮತ್ತು ವಿಜ್ಞಾನ ಇವುಗಳ ಸಂಬಂಧವನ್ನು ಕುರಿತ ಗಂಭೀರ ಚರ್ಚೆಯಲ್ಲಿ ಪ್ರಸಿದ್ಧವಾದುದೆಂದರೆ ಎಫ್.ಆರ್. ಲೀವಿಸ್ ಮತ್ತು ಸಿ.ಪಿ. ಸ್ನೋ ಅವರ ನಡುವೆ 1960ರ ಆಚೆ ಈಚೆ ನಡೆದ ವಾಗ್ವಾದ. ಅದು ಇಂದಿಗೂ, ಮುಖ್ಯವಾಗಿ ಇಂದಿನ ನಮ್ಮ ರಾಷ್ಟ್ರೀಯನೀತಿಯ ಹಿನ್ನೆಲೆಯಲ್ಲಿ, ತುಂಬಾ ಪ್ರಸ್ತುತವಾಗಿರುವುದರಿಂದ, ಆ ವಾಗ್ವಾದದ ಮುಖ್ಯಾಂಶಗಳ ಮಂಡನೆ ಇಲ್ಲಿ ತುಂಬಾ ಸೂಕ್ತ ಎಂದು ತೋರುತ್ತದೆ.

ಮೊದಲಿಗೆ ಈ ವಾಗ್ವಾದವನ್ನು ಪ್ರಾರಂಭಿಸಿದುದು ಕಾದಂಬರಿಕಾರ, ವಿಜ್ಞಾನಿ ಸಿ.ಪಿ. ಸ್ನೋ. ಅವರು, ತಮ್ಮ 'ರೀಡ್' ದತ್ತಿ ಉಪನ್ಯಾಸ'ದಲ್ಲಿ ('Two Cultures and the Scientific Revolution', 1959) ಪ್ರಬಲವಾಗಿ ಮಂಡಿಸಿದ ವಾದದ ಮುಖ್ಯಾಂಶ ಹೀಗಿದೆ: 'ಮಾನವಕುಲದ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವ ಭರವಸೆಯನ್ನು ವಿಜ್ಞಾನ–ತಂತ್ರಜ್ಞಾನ ಪ್ರಗತಿ ಮಾತ್ರ ಕೊಡಬಲ್ಲದು.' ಈ ತೀರ್ಮಾನಕ್ಕೆ ಬರುವ ಹಾದಿಯಲ್ಲಿ ಸ್ನೋ, ಒಂದು ರಾಷ್ಟ್ರದ ಪ್ರಗತಿಯೆಂದರೆ 'ಆರ್ಥಿಕ, ಔದ್ಯಮಿಕ ಪ್ರಗತಿ' ಎಂಬುದು ಸ್ವಯಂ ಸಿದ್ಧ ಸತ್ಯವೆಂಬಂತೆ ಮಂಡಿಸುತ್ತಾನೆ, ಮತ್ತು ಸಾಹಿತಿಗಳನ್ನು ವಿಜ್ಞಾನದ ಬಗ್ಗೆ ಏನೂ ಗೊತ್ತಿರದ 'Luddites' ಎಂದು ಹೀಯಾಳಿಸುತ್ತಾನೆ. ('ಲಡ್ಡೈಟ್ಸ್' ಎಂದರೆ, ಸ್ಥೂಲವಾಗಿ, ತಾಂತ್ರಿಕ ಆವಿಷ್ಕಾರಗಳನ್ನು ತಿರಸ್ಕರಿಸಿ, ತಮ್ಮದೇ ಭ್ರಮಾಲೋಕದಲ್ಲಿ ಇರುವ ಪೆದ್ದರು; ಸಾಹಿತಿಗಳು ಅಂತಹವರು ಎಂದು ಸ್ನೋ ಮಂಡಿಸುತ್ತಾನೆ.)

ಈ ವಾದವನ್ನು ಪ್ರಸಿದ್ಧ ವಿಮರ್ಶಕ ಹಾಗೂ ಶಿಕ್ಷಣತಜ್ಞ ಲೀವಿಸ್ ತನ್ನ 1962ರ ರಿಚ್‌ಮಂಡ್ ಉಪನ್ಯಾಸದಲ್ಲಿ ಸಂಪೂರ್ಣವಾಗಿ ತಿರಸ್ಕರಿಸುತ್ತಾನೆ. ಹೆಚ್ಚಿದ ಜಿ.ಡಿ.ಪಿ, ಹೊಸ ಕೈಗಾರಿಕೆಗಳು, ಲಾಭದಾಯಕ ಉದ್ಯಮಗಳು, ಇತ್ಯಾದಿ ಒಂದು ರಾಷ್ಟ್ರದ ಪ್ರಗತಿಯನ್ನಾಗಲಿ ಸಂಸ್ಕೃತಿಯನ್ನಾಗಲಿ ಪ್ರತಿಫಲಿಸುವುದಿಲ್ಲ ಎಂದು ವಾದಿಸುತ್ತಾ ಹೀಗೆ ತೀರ್ಮಾನಿಸುತ್ತಾನೆ: 'ನಮ್ಮ ಬದುಕಿನ ಉದ್ದೇಶವೇನು? ಕಟ್ಟಕಡೆಗೆ, ನಮಗೆ ಸಿಗುವುದಾದರೂ ಏನು? ವ್ಯಕ್ತಿಯ/ಸಮಾಜದ ಬದುಕು ಆಧರಿಸುವ ಜೀವಪರ ನೈತಿಕ ಮೌಲ್ಯಗಳಾದರೂ ಯಾವುವು?' — ಈ ಪ್ರಶ್ನೆಗಳಿಗೆ ಶ್ರೇಷ್ಠ ಸಾಹಿತ್ಯ ಮಾತ್ರ ಉತ್ತರಿಸಬಹುದು. ಇದರ ಅರ್ಥ ಸಾಹಿತ್ಯೇತರ ಜ್ಞಾನ ಶಾಖೆಗಳನ್ನು ನಾವು ತಿರಸ್ಕರಿಸಬೇಕೆ? ಲೀವಿಸ್ 'ಇಲ್ಲ' ಎನ್ನುತ್ತಾನೆ: 'ಉದಾರವಾದಿ ಶಿಕ್ಷಣವೆಂದರೆ ಕೇವಲ ಸಾಹಿತ್ಯದ ವಿಮರ್ಶಾತ್ಮಕ ಅಧ್ಯಯನವಲ್ಲ; ಅಂತಹ ವಿಮರ್ಶಾತ್ಮಕ ತರಬೇತಿ ಭಿನ್ನ ಕ್ಷೇತ್ರಗಳಿಗೂ ನಮ್ಮ ಅಧ್ಯಯನವನ್ನು ವಿಸ್ತರಿಸುತ್ತದೆ.'

ಈಗ, ಈ ಬಗೆಯ ಸಾಹಿತ್ಯ ಮತ್ತು ವಿಜ್ಞಾನ, ಸಾಹಿತ್ಯ ಮತ್ತು ತತ್ವಜ್ಞಾನ, ಸಾಹಿತ್ಯ ಮತ್ತು ಚರಿತ್ರೆ – ಈ ವಿಷಯಗಳನ್ನು ಕುರಿತ ಚರ್ಚೆಯಲ್ಲಿ ಅನಿವಾರ್ಯವಾಗಿ ಉದ್ಭವಿಸುವ ಕೆಲವು ಗೊಂದಲಗಳನ್ನು ದಾಖಲಿಸಬಹುದು:

ಅ) ಸಾಹಿತ್ಯ, ತತ್ವಶಾಸ್ತ್ರ, ವಿಜ್ಞಾನ, ಇತಿಹಾಸಶಾಸ್ತ್ರ, ಸಮಾಜಶಾಸ್ತ್ರ, ಇತ್ಯಾದಿಗಳು ಭಿನ್ನ ಸ್ವರೂಪ ಹಾಗೂ ಉದ್ದೇಶಗಳನ್ನು ಹೊಂದಿರುವ ಭಿನ್ನ ಜ್ಞಾನಮಾರ್ಗಗಳು. ಇವುಗಳು ಪರಸ್ಪರ 'ಭಿನ್ನ'ವೇ ಹೊರತು ಒಂದು ಮೇಲು, ಮತ್ತೊಂದು ಕೀಳಲ್ಲ.

ಆ) ತಾಂತ್ರಿಕತೆ (ಟೆಕ್ನಾಲಜಿ) ಒಂದು ಸಾಧನ; ಅದನ್ನು ಉಪಯೋಗಿಸುವುದು ಅಥವಾ ತಿರಸ್ಕರಿಸುವುದು ವ್ಯಕ್ತಿಗೆ ಬಿಟ್ಟ ವೈಯಕ್ತಿಕ ವಿಷಯ.

ಇ) ವಿಜ್ಞಾನದ ಅಧ್ಯಯನ ತಾನೇತಾನಾಗಿ ವೈಜ್ಞಾನಿಕ ದೃಷ್ಟಿಕೋನವನ್ನು ಸೃಷ್ಟಿಸುವುದಿಲ್ಲ; ಮೂಢ ನಂಬಿಕೆಗಳ ವಿಜ್ಞಾನಿಗಳಿದ್ದಾರೆ, ವೈಜ್ಞಾನಿಕ ದೃಷ್ಟಿಕೋನದ ಸಾಹಿತಿ, ತತ್ವಶಾಸ್ತ್ರಜ್ಞರಿದ್ದಾರೆ.

ಈ) 'ಅಂತಿಮ ಸತ್ಯ'ವನ್ನು ವಿಜ್ಞಾನವೂ ದರ್ಶಿಸುವುದಿಲ್ಲ, ಸಾಹಿತ್ಯವೂ ದರ್ಶಿಸುವುದಿಲ್ಲ. ಕಾವ್ಯ ಸತ್ಯ ಮತ್ತು ವೈಜ್ಞಾನಿಕ ಸತ್ಯ ('poetic truth' and 'scientific truth') ಬೇರೆ ಬೇರೆ. ■

